ದಿಃ 30.01.2020. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** ಅರ್ಜಿದಾರರ ಪರ ಶ್ರೀ ಬಿ ಆರ್ ಪಿ ವಕೀಲರಿಂದಃ

ನಾನು ಬಿ ಎಸ್ ಸಿ ವರೆಗೆ ಓದಿರುತ್ತೇನೆ. ನಾನು 7 ನೇ ಪ್ರತಿವಾದಿಯ ಗಂಡನ ತಮ್ಮ ಇರುತ್ತೇನೆ. ಸಿದ್ದಮ್ಮನ ಮನೆಗೆ ಹೋಗಿ ಬಂದು ಮಾಡುತ್ತಿದ್ದೆನು. ಸಿದ್ದಮ್ಮ ಅರ್ಜಿದಾರರ ಆಶ್ರಯದಲ್ಲಿ ಇದ್ದರು ಎಂದರೆ ಸರಿ . ಸಿದ್ದಮ ಕಳೆದ 20 ವರ್ಷಗಳಿಂದ ಅರ್ಜಿದಾರರ ಆಶ್ರಯದಲ್ಲಿ ಇದ್ದರು. ತನ್ನ ಜೊತೆ ಇದ್ದಾಗ ಅರ್ಜಿದಾರರು ಸಿದ್ದಮ್ಮ ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ದಿಃ 01-08-2012 ರಂದು ವಿಲ್ ನಾಮೆಯನ್ನು ಬರೆಯಲಾಗಿದೆ. ನಾನು ದಾಖಲೆಯನ್ನು ನೋಡಿ ಈ ದಿನಾಂಕ ಹೇಳುತ್ತಿದ್ದೇನೆ. 2012 ರಲ್ಲಿ ಸಿದ್ದಮ್ಮ ಇವರಿಗೆ 85 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸಿದ್ದಮ್ಮ ಇವರು 7 ನೇ ಎದುರುದಾರರ ಜೊತೆ ಇದ್ದಾಗ ಅವರ ಸೊಂಟ ಮುರಿದಿತ್ತು ಎಂದರೆ ಸರಿ. ಈ ಕಾರಣಕ್ಕೆ ಅವರಿಗೆ ತಮ್ಮ ದೈನಂದಿನ ಚಟುವಟಿಕೆಗಳನ್ನು ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ವಿಲ್ ನಾಮೆಯನ್ನು ಓದಿ ತಿಳಿದುಕೊಂಡಿಲ್ಲ.

ಅಸಲು ದಾವೆ 65/89 ರ ಕುರಿತು ನನಗೆ ಸಿದ್ದಮ್ಮ ತಿಳಿಸಿದ್ದರು. ಸಿದ್ದಮ್ಮ ಅವಿದ್ಯಾವಂತರು ಎಂದರೆ ಸರಿ. ಅಸಲು ದಾವೆ 65/89 ರಲ್ಲಿ ಕಾಣಿಸಿದ ದಾವಾ ಶೆಡ್ಯುಲ್‌ನ್ನು ನಾನು ನೋಡಿಲ್ಲ. ಸದರಿ ದಾವೆಯಲ್ಲಿ ಕಾಣಿಸಿದ ದಾವಾ ಶೆಡ್ಯುಲ್ ಎ, ಬಿ,ಸಿ,ಡಿ ಗಳಲ್ಲಿ ಯಾವ ಭಾಗವನ್ನು ಸಿದ್ಧಮ್ಮನಿಗೆ ಕೊಡಲಾಗಿದೆ ಎಂದು ಹೇಳಲು ಆಗುವುದಿಲ್ಲ. ಸಾಕ್ಷಿಯು ಸದರಿ ಆಸ್ತಿಗಳ ಪೈಕಿ ಒಂದು ಭಾಗ ಕೊಡಲಾಗಿದೆ ಎಂದು ಹೇಳುತ್ತಾರೆ. ನಾನು ಮನೆಗೆ ಹೋದಾಗ ಸಿದ್ದಮ್ಮ ನನಗೆ ವಿಲ್ ನಾಮೆಗೆ ಸಾಕ್ಷಿಯಾಗಿ ಬರಲು ತಿಳಿಸಿದ್ದರು. ಇನ್ನೊಬ್ಬ ಸಾಕ್ಷಿದಾರ ಮಹಂತೇಶ ಇವರು ಕೂಡ ಸಿದ್ದಮ್ಮ ಸಾಕ್ಷಿದಾರರಾಗಿ ಬರಲು ತಿಳಿಸಿದ್ದರು. ಮಹಂತೇಶ ಇವರು ಮತ್ತಿ ಗ್ರಾಮದವರು ಇರುತ್ತಾರೆ. ಮಹಂತೇಶ ಇವರು ಸಿದ್ದಮ್ಮನವರಿಗೆ ಸಂಬಂಧಿಕರು ಅಲ್ಲ. ಸಿದ್ದಮ್ಮನವರು ಮತ್ತಿ ಗ್ರಾಮದಲ್ಲಿಯ ಹೊಲಕ್ಕೆ ಬರುತ್ತಿದ್ದ ಸಮಯದಲ್ಲಿ ಮಹಂತೇಶ ಇವರು ಪಕ್ಕದ ಹೊಲದವರಾಗಿದ್ದರಿಂದ ಸಿದ್ದಮ್ಮನವರಿಗೆ ಪರಿಚಯವಾಗಿರುತ್ತಾರೆ. ಸಿದ್ದಮ್ಮನವರು ಮತ್ತಿ ಗ್ರಾಮದಲ್ಲಿಯ ಯಾವ ಸರ್ವೆ ನಂಬರ್ ನಲ್ಲಿಯ ಹೊಲಕ್ಕೆ ಬರುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಅದೇ ರೀತಿ ಆ ಹೊಲದ ವಿಸ್ತೀರ್ಣ ಕೂಡ ಹೇಳಲು ಆಗುವುದಿಲ್ಲ. ವಿಲ್ ನಾಮೆ ನೊಂದಾಯಿಸಿ ಕೊಳ್ಳಲು ಸಬ್‌ರಿಜಿಸ್ಟರ್ ಸಿದ್ದಮ್ಮನವರ ಮನೆಗೆ ಬಂದಿದ್ದರು. ನಾನು ಸಿದ್ದಮ್ಮನವರ ಮನೆಗೆ ಹೋಗುವಷ್ಟರಲ್ಲಿ ವಿಲ್ ನಾಮೆಯನ್ನು ತಯಾರಿಸಲಾಗಿತ್ತು ಎಂದರೆ

ಸರಿಯಲ್ಲ. ವಿಲ್ ನಾಮೆಯನ್ನು ದಾವಣಗೆರೆಯಲ್ಲಿ ಸಿದ್ದಮ್ಮ ಇರುತ್ತಿದ್ದ ಮನೆಯಲ್ಲಿ ತಯಾರಿಸಲಾಗಿದೆ. ವಿಲ್ ನಾಮೆಯನ್ನು ಕೈಯಲ್ಲಿ ಬರೆಯಲಾಗಿದೆಯೋ ಅಥವಾ ಮುದ್ರಿಸಲಾಗಿದೆಯೋ ಎಂದು ಗೊತ್ತಿಲ್ಲ. ಆ ಸಮಯದಲ್ಲಿ 7 ನೇ ಎದುರುದಾರರಾರದ ಸುಕನ್ಯ ಮತ್ತು ಆಕೆಯ ಗಂಡ ಜಗದೀಶ ಮನೆಯಲ್ಲಿ ಇರಲಿಲ್ಲ. ಮನೆಯಲ್ಲಿ ವಿಲ್ ನಾಮೆಯನ್ನು ತಯಾರಿಸಲು ಸಿದ್ದಮ್ಮನೇ ಎಲ್ಲಾ ವ್ಯವಸ್ಥೆ ಮಾಡಿದ್ದರು. ವಿಲ್ ನಾಮೆ ತಯಾರಿಸಲು ಸಿದ್ದಮ್ಮ ಯಾವುದೇ ದಾಖಲೆಯನ್ನು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಆಸ್ತಿಗಳ ವಿಸ್ತೀರ್ಣ, ಅವುಗಳ ಸರ್ವೆ ನಂಬರ್ ಮತ್ತು ಆಸ್ತಿಯ ಡೋರ್ ನಂಬರ್, ಚೆಕ್ಕುಬಂದಿ ಇವುಗಳನ್ನು ಸಿದ್ದಮ್ಮನವರೇ ತಿಳಿಸಿರುತ್ತಾರೆ.

ಸಿದ್ದಮ್ಮನವರು ದಿಃ 05.08.2014 ರಂದು ತೀರಿಕೊಂಡಿರುತ್ತಾರೆ. 2012 ರಲ್ಲಿ ಸಿದ್ದಮ್ಮನವರಿಗೆ ಮಾತನಾಡಲು ಆಗುತ್ತಿರಲಿಲ್ಲ ಮತ್ತು ಅವರು ನಡೆದಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರ ಸ್ಥಿತಿ ಚಿಂತಾಜನಕ ಇತ್ತು ಮತ್ತು ಅವರು ಮರಣಾವಸ್ಥೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಸಿದ್ದಮ್ಮನಿಗೆ ಗಂಡು ಮಕ್ಕಳ ಜೊತೆ ಸಂಬಂಧ ಚೆನ್ನಾಗಿ ಇರಲಿಲ್ಲವಾದ್ದರಿಂದ ಅವರು ವಿಲ್ ನಾಮೆಯನ್ನು ತಮ್ಮ ಮಗಳಾದ ಸುಕನ್ಯ ಇವರ ಹೆಸರಿಗೆ ಮಾಡುತ್ತಿರುವುದಾಗಿ ಹೇಳಿದ್ದರು. ಸಿದ್ದಮ್ಮನವರಿಗೆ 3 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ವಿಲ್ ನಾಮೆಯಲ್ಲಿ ಸಿದ್ದಮ್ಮನವರು ಮಾರಾಟ ಮಾಡಿದ ಆಸ್ತಿ ಹಾಗೂ ಸುಕನ್ಯ ಇವರು ಮಾರಾಟ ಮಾಡಿದ ಆಸ್ತಿಗಳನ್ನು ಸೇರಿಸಲಾಗಿದೆ ಎಂದರೆ ಗೊತ್ತಿಲ್ಲ. 2012 ರಲ್ಲಿ ವಿಲ್ ನಾಮೆ ಆದ ಸಮಯದಲ್ಲಿ ಸಿದ್ದಮ್ಮನವರಿಗೆ ನೆನಪಿನ ಶಕ್ತಿ ಕುಂದಿತ್ತು ಎಂದರೆ ಸರಿಯಲ್ಲ. ಈ ಕಾರಣಕ್ಕೆ ಅವರು ಮಾರಾಟವಾದ ಆಸ್ತಿಗಳನ್ನು ಕೂಡ ವಿಲ್ ನಾಮೆಯಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ವಿಲ್ ನಾಮೆಗೆ ಸಾಕ್ಷಿಯಾಗಲು ನನಗೆ ಶ್ರೀಮತಿ ಸುಕನ್ಯ ಮತ್ತು ಆಕೆಯ ಗಂಡ ತಿಳಿಸಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಮತ್ತು ಅಣ್ಣ ಇವರ ಮಾತು ಕೇಳಿ ನಾನು ಮೊದಲೇ ತಯಾರಿಸಿದ ವಿಲ್ ನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವಿಲ್ ನಾಮೆಯಲ್ಲಿಯ ಸಿದ್ದಮ್ಮನವರ ಹೆಬ್ಬಟ್ಟಿನ ಗುರುತನ್ನು ಸಬ್‌ರಿಜಿಸ್ಟರ್ ಗುರುತಿಸಿರುತ್ತಾರೆ. ಸಿದ್ದಮ್ಮನವರಿಗೆ ವಿಲ್ ನಾಮೆ ತಯಾರಿಸುವ ಯಾವುದೇ ಇಚ್ಛೆ ಇರಲಿಲ್ಲ ಎಂದರೆ ಸರಿಯಲ್ಲ. ವಿಲ್ ನಾಮೆಯನ್ನು ಸುಕನ್ಯ ಮತ್ತು ಆಕೆಯ ಗಂಡ ಕೂಡಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ವಿಲ್ ನಾಮೆ ತಯಾರಿಸುವ ಸಮಯದಲ್ಲಿ ಸುಕನ್ಯ ಮತ್ತು ಆಕೆಯ ಗಂಡ ಇದ್ದರು ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** 1 ನೇ ಎದುರುದಾರರ ಪರ ಶ್ರೀ ಎಸ್ ಕೆ ವಕೀಲರಿಂದಃ

ದಾವಣಗೆರೆಯಲ್ಲಿಯ 7 ನೇ ಎದುರುದಾರರ ಮನೆಯಿಂದ ಮತ್ತಿ ಗ್ರಾಮ 23 ಕಿ.ಮೀ ದೂರದಲ್ಲಿದೆ. ಸಿದ್ದಮ್ಮನವರು ನನಗೆ ದಿಃ 23.07.2012 ರಂದು ವಿಲ್ ನಾಮೆಗೆ ಸಹಿ ಹಾಕಲು

ಕೇಳಿಕೊಂಡಿದ್ದರು. ಸಿದ್ದಮ್ಮನವರು ನನಗೆ ದಿಃ 01.08.2012 ರಂದು ವಿಲ್ ನಾಮೆಯನ್ನು ಬರೆಸುವುದಾಗಿ ಮತ್ತು ಆ ದಿನ ಸಾಯಂಕಾಲ 6 ಗಂಟೆಗೆ ಬರಲು ನನಗೆ ತಿಳಿಸಿದ್ದರು. ನಾನು ಅದೇ ರೀತಿ ದಿಃ 01.08.2012 ರಂದು ಮನೆಗೆ ಹೋಗಿದ್ದೆ. ನಾನು ಮನೆಗೆ ಹೋದಾಗ ಅಲ್ಲಿ ಸಿದ್ದಮ್ಮ ಮತ್ತು ಸಬ್ ರಿಜಿಸ್ಟರ್ ಇದ್ದರು. ಅವರ ಜೊತೆಗೆ ಇನ್ನೊಬ್ಬ ಸಾಕ್ಷಿದಾರರಾದ ಮಹಂತೇಶ ಇದ್ದರು. ಬೇರೆ ಯಾರು ಇರಲಿಲ್ಲ. ನಾನು ಮನೆಗೆ ಹೋಗುವಷ್ಟರಲ್ಲಿ ವಿಲ್ ನಾಮೆ ತಯಾರಾಗಿತ್ತು. ವಿಲ್ ನಾಮೆಯನ್ನು ಸಬ್ ರಿಜಿಸ್ಟರ್ ಕಚೇರಿಯವರು ಸಿದ್ದಮ್ಮನ ಮನೆಯಲ್ಲಿ ತಯಾರಿಸಿರುತ್ತಾರೆ. ಸಿದ್ದಮ್ಮನವರಿಗೆ ದಾಖಲೆ ನೋಡಿ ಅವುಗಳ ವಿವರ ಹೇಳಲು ಆಗುತ್ತಿರಲಿಲ್ಲ. ಆ ದಿನ ಸಾಯಂಕಾಲ 6 ಗಂಟೆಯಿಂದ 7.30 ರ ಅವಧಿಯಲ್ಲಿ ವಿಲ್ ನಾಮೆ ತಯಾರಿಸಲಾಯಿತು. ನಾನು ವಿಲ್ ನಾಮೆಗೆ ಸಹಿ ಹಾಕುವ ಮೊದಲು ಬೇರೆ ಯಾರು ಸಹಿ ಹಾಕಿರಲಿಲ್ಲ.

7 ನೇ ಎದುರುದಾರರ ಮನೆಯ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. 7 ನೇ ಎದುರುದಾರರು ಮತ್ತು ಸಿದ್ದಮ್ಮ ಅಕ್ಕಪಕ್ಕದ ಮನೆಯವರೊಂದಿಗೆ ಒಳ್ಳೆಯ ಸಂಬಂಧ ಹೊಂದಿದ್ದರು. ಸಿದ್ದಮ್ಮನವರಿಗೆ ನಮ್ಮ ಕುಟುಂಬ  ಹೊರತು ಪಡಿಸಿ ಮತ್ತಿ ಗ್ರಾಮದಲ್ಲಿ ಬೇರೆ ಸಂಬಂಧಿಕರು ಇರಲಿಲ್ಲ ಎಂದರೆ ಸರಿ. ಮತ್ತಿ ಗ್ರಾಮದಲ್ಲಿ ನಮ್ಮ ಮನೆ ಬಿಟ್ಟು ಬೇರೆ ಕಡೆ ಹೋಗುವ ಅವಶ್ಯಕತೆ ಸಿದ್ದಮ್ಮನವರಿಗೆ ಇರಲಿಲ್ಲ ಎಂದರೆ ಸರಿ.

ಸುಕನ್ಯ ಇವರನ್ನು ಹೊರತು ಪಡಿಸಿ ಬೇರೆ ಮಕ್ಕಳೊಂದಿಗೆ ಸಿದ್ದಮ್ಮನ ಸಂಬಂಧದ ಕುರಿತು ನನಗೆ ಗೊತ್ತಿಲ್ಲ. ಸಿದ್ದಮ್ಮನವರು ಎಲ್ಲಾ ಮಕ್ಕಳೊಂದಿಗೆ ಚೆನ್ನಾಗಿ ಇದ್ದರು ಎಂದರೆ ಸರಿ. ಅರ್ಜಿದಾರರೊಂದಿಗೆ ಜಗಳ ಮಾಡಿಕೊಂಡು ಸಿದ್ದಮ್ಮನವರು ಸುಕನ್ಯ ಇವರೊಂದಿಗೆ ವಾಸವಾಗಿದ್ದರು. ಹಿರೆ ಮಗನೊಂದಿಗೆ ಜಗಳ ಮಾಡಿಕೊಂಡಿದ್ದೇನೆ ಎಂದು ಸಿದ್ದಮ್ಮ ನನಗೆ ಹೇಳುತ್ತಿದ್ದರು. ಈ ಕುರಿತು ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ. ಸಿದ್ದಮ್ಮನವರನ್ನು ಆಕೆಯ ಇತರೆ ಹೆಣ್ಣು ಮಕ್ಕಳು, ಮೊಮಕ್ಕಳು ಎಲ್ಲಿ ಭೇಟಿ ಮಾಡುತ್ತಿದ್ದರು ಎಂದು ಗೊತ್ತಿಲ್ಲ.

ವಿಲ್ ನಾಮೆ ಬರೆಯಲು ಕಾಗದವನ್ನು ಸಬ್ ರಿಜಿಸ್ಟರ್ ತಂದಿದ್ದರು. ಕಾಗದವನ್ನು ತರಲು ಶುಲ್ಕವನ್ನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ರಂಗಪ್ಪ ಎನ್ನುವವರು ಬರೆಸಿದ್ದರು. ರಂಗಪ್ಪನವರು ಈ ರೀತಿ ಶುಲ್ಲವನ್ನು ದಿಃ 01.08.2012 ರಂದು ಭರೆಸಿದ್ದರು. ದಿಃ 20.07.2012 ರಂದು ಸಿದ್ದಮ್ಮನವರು ರಂಗಪ್ಪನನ್ನು ಭೇಟಿಯಾಗಿ ಶುಲ್ಕವನ್ನು ಭರಿಸುವಂತೆ ಹೇಳಿದ್ದರು. ಸಿದ್ದಮ್ಮನವರು ಹೊರಗಡೆ ಓಡಾಡುತ್ತಿದ್ದರು. ಸಿದ್ದಮ್ಮನವರು ಸಬ್ ರಿಜಿಸ್ಟರ್ ಕಚೇರಿಗೆ ಹೋಗಲು ಸಮರ್ಥರು ಇದ್ದರು ಎಂದರೆ ಸರಿ. ವಿಲ್ ನಾಮೆ ಬರೆಯುವ ಸಮಯದಲ್ಲಿ ಸಿದ್ದಮ್ಮನವರು ತಮ್ಮ ಮಕ್ಕಳೊಂದಿಗೆ ಹೊಂದಿರುವ ಸಂಬಂಧದ ಬಗ್ಗೆ ಹೇಳಿಲ್ಲ. ವಿಲ್

ನಾಮೆಯಲ್ಲಿ ನಮೂದಿಸಿದ ಆಸ್ತಿಗಳ ವಿವರ ನನಗೆ ಗೊತ್ತಿಲ್ಲ. ವಿಲ್ ಬರೆಯುವ ಸಮಯದಲ್ಲಿ ನಾನು, ಇನ್ನೊಬ್ಬ ಸಾಕ್ಷಿದಾರ ಮತ್ತು ಸಬ್ ರಿಜಿಸ್ಟರ್ ಒಂದೇ ಕೊಠಡಿಯಲ್ಲಿ ಇದ್ದೆವು.

ನಾನು ಹೇಳುವಂತೆ ದಿಃ 01.08.2012 ರಂದು ಸಿದ್ದಮ್ಮನವರು ಯಾವುದೇ ವಿಲ್ ನಾಮೆಯನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಸಬ್ ರಿಜಿಸ್ಟರ್ ನನಗೆ ವಿಲ್ ನಾಮೆಗೆ ಸಹಿ ಹಾಕಲು ಬರಲು ಹೇಳಿಲ್ಲ. ಅಸಲು ದಾವೆ 65/89 ರಲ್ಲಿಯ ಪಕ್ಷಗಾರರ ಬಗ್ಗೆ ಮತ್ತು ಆ ದಾವೆಯಲ್ಲಿಯ ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ದಾವೆಯಲ್ಲಿ ಯಾರ್ಯಾರಿಗೆ ಯಾವ ಆಸ್ತಿಗಳನ್ನು ಕೊಡಬೇಕೆಂದು ತೀರ್ಮಾನವಾಗಿತ್ತು ಎಂದು ಗೊತ್ತಿಲ್ಲ. ವಿಲ್ ನಾಮೆಯು ದಿಃ 01.08.2012 ರಂದು ನೊಂದಾಯಿಸಲ್ಪಟ್ಟಿದೆ. ದಿಃ 01.08.2012 ರ ನಂತರ ವಿಲ್ ನಾಮೆ ಸಂಬಂಧ ಏನಾಯಿತೆಂದು ಗೊತ್ತಿಲ್ಲ. ಆಸ್ತಿಗಳ ಸಂಬಂಧ ಸುಕನ್ಯ ಮತ್ತು ಆಕೆಯ ಸಹೋದರ ಸಹೋದರಿಯರ ಮಧ್ಯೆ ವಿವಾದ ಇತ್ತು ಎಂದರೆ ಸರಿ. ಈ ವಿವಾದದ ಬಗ್ಗೆ ಸುಕನ್ಯ ಮತ್ತು ಆಕೆಯ ಗಂಡನಿಗೆ ಗೊತ್ತಿತ್ತು ಎಂದರೆ ಸರಿ.

ಸಿದ್ದಮ್ಮನವರ ಅನಕ್ಷರತೆ ಮತ್ತು ಅನಾರೋಗ್ಯವನ್ನು ದುರುಪಯೋಗ ಪಡಿಸಿಕೊಂಡು ಆಸ್ತಿಯನ್ನು ಎತ್ತಿಹಾಕಲು ಸುಕನ್ಯ, ಆಕೆಯ ಗಂಡ, ನಾನು ಮತ್ತು ಇನ್ನೊಬ್ಬ ಸಾಕ್ಷಿದಾರರು ಸೇರಿ ವಿಲ್ ನಾಮೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸಿದ್ದಮ್ಮನವರಿಗೆ ನಿಶಾನೆ ಆರ್ -6 ವಿಲ್ ನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ಕೂಡ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಆರ್ -6 ತಯಾರಿಸುವ ಸಮಯದಲ್ಲಿ ಸಿದ್ದಮ್ಮನವರ ಮಾನಸಿಕ ಮತ್ತು ದೈಹಿಕ ಆರೋಗ್ಯ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಆರ್ -6 ಬರೆಯಲು ಸಿದ್ದಮ್ಮನವರು ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. 7 ನೇ ಎದುರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ</u>** ಎದುರುದಾರರ ನಂಬರ್ 6(ಎ) ಮತ್ತು (ಬಿ) ಪರ ವಕೀಲರು 1 ನೇ ಎದುರುದಾರರ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ 30.01.2020 ರಂದು ಬೆರಳಚ್ಚು ಮಾಡಲಾಯಿತು)

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***